SEPTEMBER 02, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಮೈಸೂರು ಅರಮನೆಗೆ ಭೇಟಿ; ರಾಜವಂಶಸ್ಥರೊಂದಿಗೆ ಸಮಾಲೋಚನೆ.**

**ಕಿವುಡು ಮತ್ತು ಮೂಕ ವಿಶೇಷಚೇತನರ ಸಬಲೀಕರಣಕ್ಕಾಗಿ, 'ಸಂಕೇತ ಭಾಷಾ ನಿಘಂಟು' ಜಾರಿಗೆ.**

**ವಚನ ಸಾಹಿತ್ಯದ, ಬಹುಮುಖ ಅಧ್ಯಯನ ಮತ್ತು ಸಂಶೋಧನೆಗೆ, ಬಸವ ಸಮಿತಿ ಯೋಜನೆ.**

**ಇಂದು ವಿಶ್ವ ತೆಂಗು ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ರಾಜ್ಯಕ್ಕೆ ಎರಡು ದಿನಗಳ ಭೇಟಿ ನೀಡಿದ್ದು, ಎರಡನೇ ದಿನವಾದ ಇಂದು ಬೆಳಗ್ಗೆ, 8 ಗಂಟೆ 50 ನಿಮಿಷಕ್ಕೆ, ಮೈಸೂರು ಅರಮನೆಗೆ ಭೇಟಿ ನೀಡಿ, ರಾಜ ವಂಶಸ್ಥರೊಂದಿಗೆ ಸಮಾಲೋಚಿಸಲಿದ್ದಾರೆ. ರಾಷ್ಟ್ರಪತಿಯವರನ್ನು ಮೈಸೂರು ಸಂಸ್ಥಾನದ ರಾಜಮಾತೆ, ಪ್ರಮೋದಾದೇವಿ ಒಡೆಯರ್ ಅವರು ಸ್ವಾಗತಿಸಲಿದ್ದಾರೆ. ಅರಮನೆ ವೀಕ್ಷಣೆ ಬಳಿಕ, ರಾಷ್ಟ್ರಪತಿಯವರು ಉಪಾಹಾರ ಸೇವಿಸಿ, ಬಳಿಕ ತಮಿಳುನಾಡಿಗೆ ಪ್ರಯಾಣ ಬೆಳೆಸಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನಿನ್ನೆ ರಾತ್ರಿ, ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ, ನಾಡದೇವಿ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದರು.**

<><><>

‘ವಜ್ರ ಮಹೋತ್ಸವ’ ಆಚರಿಸುತ್ತಿರುವ, ಮೈಸೂರಿನ ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ, ಮಾತು ಮತ್ತು ಕೇಳಿಸಿಕೊಳ್ಳುವಿಕೆಯಲ್ಲಿ ತೊಂದರೆಯುಳ್ಳ ಮಕ್ಕಳಿಗಾಗಿ ಸ್ಥಾಪಿಸಲಾದ, ‘ಇನ್‌ಕ್ಲೂಸಿವ್ ಥೆರಪಿ ಪಾರ್ಕ್’ ದೇಶದಲ್ಲೇ ಮಾದರಿ ಪ್ರಯೋಗ ಎಂದು, ರಾಷ್ಟ್ರಪತಿ ದ್ರೌಪದಿ ಮುರ್ಮು, ಶ್ಲಾಘಿಸಿದ್ದಾರೆ. ಮೈಸೂರು, ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆ–ಆಯಿಷ್ ನಲ್ಲಿ ವಜ್ರ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಅಥಿತಿಯಾಗಿ ಪಾಲ್ಗೊಂಡಿದ್ದ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಮಾತನಾಡಿ, ಕೇಂದ್ರ ಸರ್ಕಾರ ವಿಶೇಷಚೇತನರ ಸಬಲೀಕರಣಕ್ಕಾಗಿ, ‘ಸಬ್ ಕಾ ಸಾಥ್, ಸಬ್ ಕಾ ವಿಕಾಸ್’ ಧ್ಯೇಯದೊಂದಿಗೆ, ಶ್ರವಣ ದೋಷ ಉಳ್ಳವರಿಗಾಗಿ, ಕಾಕ್ಲಿಯರ್ ಇಂಪ್ಲಾಂಟ್ ಯೋಜನೆ ಜಾರಿಗೊಂಡಿದೆ ಎಂದರು. ಭಾರತೀಯ ಸಂಕೇತ ಭಾಷಾ ನಿಘಂಟನ್ನು ವಿಶೇಷಚೇತನರ ಅನುಕೂಲದ ದೃಷ್ಟಿಯಿಂದ, ಅಭಿವೃದ್ಧಿಪಡಿಸಲಾಗಿದೆ. ಕೃತಕ ಬುದ್ಧಿಮತ್ತೆ ಆಧರಿಸಿದ, ಡಿಜಿಟಲ್ ಚಿಕಿತ್ಸೆ ಹಾಗೂ ಟೆಲಿ ಆಡಿಯಾಲಜಿ ಕ್ಷೇತ್ರದಲ್ಲಿ ಹೊಸ ಸಾಧ್ಯತೆಗಳನ್ನು ಅನ್ವೇಷಿಸಲಾಗುತ್ತಿದೆ ಎಂದರು.

<><><>

ಕಾಯಕ ಸಿದ್ಧಾಂತ, ದಾಸೋಹ ತತ್ವ ಹಾಗೂ ಪ್ರಜಾಪ್ರಭುತ್ವದ ತಳಹದಿ ಮೇಲೆ, ರಚನೆಗೊಂಡ ವಚನ ಸಾಹಿತ್ಯದ, ಬಹುಮುಖ ಅಧ್ಯಯನ ಮತ್ತು ಸಂಶೋಧನೆಯ ಅವಶ್ಯಕತೆ ಇದೆ ಎಂದು, ಬಸವ ಸಮಿತಿಯ ರಾಜ್ಯಾಧ್ಯಕ್ಷ, ಅರವಿಂದ ಜತ್ತಿ ಅಭಿಪ್ರಾಯ ಪಟ್ಟಿದ್ದಾರೆ. ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿ ’ತ್ ಆಯೋಜಿಸಿದ್ದ, ಎಂ.ಎಂ. ಕಲಬುರ್ಗಿ ಮತ್ತು ಸ.ಸ. ಮಾಳವಾಡ ದತ್ತಿ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ಕಲಬುರ್ಗಿ ಹಾಗೂ ಮಾಳವಾಡರು, ವಚನ ಸಾಹಿತ್ಯಕ್ಕೆ ವಿಶೇ ’ವಾದ ಕೊಡುಗೆ ನೀಡಿದ್ದಾರೆ ಎಂದರು. ಉಮಾದೇವಿ ಕಲಬುರ್ಗಿ, ಲಿಂಗರಾಜ ಅಂಗಡಿ ಹಾಗೂ ವೀರಣ್ಣ ರಾಜೂರ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

‘ಸುಸ್ಥಿರ ಕ್ರಮ ಮತ್ತು ಪಾಲುದಾರಿಕೆ ಮೂಲಕ ನಾವಿನ್ಯತೆ ಉತ್ತೇಜಿಸುವುದು ಮತ್ತು ತೆಂಗು ವಲಯವನ್ನು ಪುನರುಜ್ಜೀವಿತಗೊಳಿಸುವುದು’ ಧ್ಯೇಯದೊಂದಿಗೆ, ಇಂದು ವಿಶ್ವ ತೆಂಗು ದಿನ, ಆಚರಿಲಾಗುತ್ತಿದೆ. ಕಾಸರಗೋಡಿನ, ಕೇಂದ್ರೀಯ ತೋಟಗಾರಿಕೆ ಬೆಳೆಗಳು ಮತ್ತು ತೆಂಗು ಸಂಶೋಧನಾ ಸಂಸ್ಥೆ–ಸಿ.ಪಿ.ಸಿ.ಆರ್.ಐ ನಲ್ಲಿ, ವಿಶ್ವ ತೆಂಗು ದಿನಾಚರಣೆ ಅಂಗವಾಗಿ, ಮೂರು ದಿನಗಳ ಅಂತಾರಾಷ್ಟ್ರೀಯ ಕಾರ್ಯಾಗಾರ ಆಯೋಜಿತವಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಿ.ಪಿ.ಸಿ.ಆರ್.ಐ ನಿರ್ದೇಶಕ ಕೆ. ಬಾಲಚಂದ್ರ ಹೆಬ್ಬಾರ್...

<><><>

ಬಾಲಚಂದ್ರ ಹೆಬ್ಬಾರ್ ಧ್ವನಿ 68 ಸೆಕೆಂಡುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಕಲ್ಯಾಣ ಕರ್ನಾಟಕದ ಕಲಬುರಗಿ ಹಾಗೂ ಕಿತ್ತೂರು ಕರ್ನಾಟಕದ ಧಾರವಾಡ ಸೇರಿದಂತೆ, ವಿವಿಧ ಜಿಲ್ಲೆಗಳಲ್ಲಿ ನಿರಂತರ ಸುರಿದ ಮಳೆಗೆ ಸಂಭವಿಸಿದ ಹಾನಿಯ ಸಮೀಕ್ಷೆಯನ್ನು, ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಕೈಗೊಂಡಿದ್ದು, ಸದ್ಯದಲ್ಲೇ ಹಾನಿಯ ಸಮಗ್ರ ವರದಿಯನ್ನು, ಆಯಾ ಜಿಲ್ಲಾಡಳಿತಗಳ ಮೂಲಕ, ಸರ್ಕಾರಕ್ಕೆ ಸಲ್ಲಿಸಲಿದ್ದಾರೆ. ಕಲಬುರಗಿ ಜಿಲ್ಲೆಯ ಜೇವರ್ಗಿ, ಯಾದಗಿರಿ ಜಿಲ್ಲೆಯ ವಡಗೇರಾ, ಶಹಾಪುರ ತಾಲೂಕುಗಳ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ, ಕಲಬುರಗಿ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಬೆಳೆ ಹಾನಿ ಪರಿವೀಕ್ಷಣೆ ನಡೆಸಿದರು. ಧಾರವಾಡ ಜಿಲ್ಲೆ ಕಲಘಟಗಿ ತಾಲೂಕು ವ್ಯಾಪ್ತಿಯ, ಹುಲಕೊಪ್ಪ ಹಾಗೂ ಘಳಗಿ ಗ್ರಾಮಗಳಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಮಳೆ ಹಾಗೂ ವನ್ಯಜೀವಿಗಳ ಉಪಟಳದಿಂದ ಹಾನಿಗೊಳಗಾದ, ರೈತರ ಬೆಳೆಗಳನ್ನು ವೀಕ್ಷಿಸಿದರು. ಬಳಿಕ, ಕಲಘಟಗಿಯಲ್ಲಿ ಜನಸ್ಪಂದನ ಸಭೆ ನಡೆಸಿ, ಸಾರ್ವಜನಿಕರ ಅಹವಾಲು ಆಲಿಸಿದರು. ವಿಜಯಪುರ ಜಿಲ್ಲೆಯಲ್ಲಿ, ಇತ್ತೀಚಿನ ಮಳೆಯಿಂದಾಗಿ, 5 ಸಾವಿರದ 322 ದಶಾಂಶ 1, 9 ಹೆಕ್ಟರ್ ಕೃಷಿ ಬೆಳೆ ಹಾಗೂ 272 ದಶಾಂಶ 2-0 ಹೆಕ್ಟರ್ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ ಎಂದು, ಪ್ರಾಥಮಿಕ ವರದಿ ತಿಳಿಸಿದ್ದಾಗಿ, ಜಿಲ್ಲಾಧಿಕಾರಿ ಆನಂದ ತಿಳಿಸಿದ್ದಾರೆ.

<><><>

ಮಾರುಕಟ್ಟೆ ಬೆಲೆಗಳ ಏರಿಳಿತಕ್ಕೆ ಅನುಗುಣವಾಗಿ, ಬೆಳೆ ಹಾನಿ ವಿಮೆ ಹಾಗೂ ನಷ್ಟ ಪರಿಹಾರದ ಮೊತ್ತವನ್ನು, ವೈಜ್ಞಾನಿಕವಾಗಿ ಲೆಕ್ಕಿಸಿ, ರೈತರಿಗೆ ಪರಿಹಾರ ಪಾವತಿಸುವಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರವನ್ನು, ರಾಜ್ಯ ರೈತ ಸಂಘದ ಉಪಾಧ್ಯಕ್ಷ ನಾಗಪ್ಪ ಉಂಡಿ ಆಗ್ರಹಿಸಿದ್ದಾರೆ. ಧಾರವಾಡದಲ್ಲಿ ಮಾತನಾಡಿದ ಅವರು, ಮಳೆ ಹಾನಿ ಅನುಭವಿಸಿದ, ರಾಜ್ಯದ ಎಲ್ಲ ತಾಲೂಕುಗಳಲ್ಲಿ, ವೈಜ್ಞಾನಿಕವಾಗಿ, ಸ್ಟ್ಯಾಂಡರ್ಡ್ ಈಲ್ಡ್ ಮಾನದಂಡದಡಿ, ಸಮೀಕ್ಷೆ ಕೈಗೊಂಡು, ಬೆಳೆ ನಷ್ಟ ಪರಿಹಾರ ಪಾವತಿಸಬೇಕು ಎಂದು ಒತ್ತಾಯಿಸಿದರು.

<><><>

ಈ ತಿಂಗಳ 13 ರಿಂದ, 16ರ ವರೆಗೆ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಕೃಷಿ ಮೇಳ ಆಯೋಜಿಸಿದೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿತ ಕೃಷಿ ಮೇಳದ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದರು.

<><><>

ಬೆಳಗಾವಿ ಜಿಲ್ಲೆ, ಚನ್ನಮ್ಮನ ಕಿತ್ತೂರು ತಾಲೂಕು, ಬೈಲೂರಿನ ತತ್ವಪದಕಾರ ರಾಮಪ್ಪ ಹಂಚಿನಮನಿ ಅವರಿಗೆ, ಧಾರವಾಡದ ಜಾನಪದ ಸಂಶೋಧನ ಕೇಂದ್ರ, ಗಾನ-ಗಾರುಡಿಗ ಬಸವಲಿಂಗಯ್ಯ ಹಿರೇಮಠ ರಾಜ್ಯ ಪ್ರಶಸ್ತಿ ನೀಡಿ, ಗೌರವಿಸಿದೆ. ಧಾರವಾಡದ ಆಲೂರು ವೆಂಕಟರಾವ ಸಭಾ ಭವನದಲ್ಲಿ, ಶ್ರೀಮತಿ ಗುರಮ್ಮ ಹಾಗೂ ವೀರಪ್ಪ ಚಿನಗುಡಿ ದತ್ತಿ ಅಂಗವಾಗಿ ಆಯೋಜಿಸಿದ ಕಾರ್ಯಕ್ರಮದಲ್ಲಿ, ಪ್ರಶಸ್ತಿ ಸ್ವೀಕರಿಸಿದ, ವಿಶೇಷಚೇತನ, ಹಿರಿಯ ತತ್ವಪದಕಾರರಾದ ರಾಮಪ್ಪ ಹಂಚಿನಮನಿ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ರಾಮಪ್ಪ ಸೋಮಪ್ಪ ಹಂಚಿನಮನಿ ಧ್ವನಿ 35 ಸೆಕೆಂದುಗಳು

<><><>

ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ಫಿಟ್ ಇಂಡಿಯಾ ಅಭಿಯಾನದ ಅಂಗವಾಗಿ, ಧಾರವಾಡದಲ್ಲಿ ಆಯೋಜಿಸಿದ್ದ, ಸೈಕ್ಲೋಥಾನ್‌ಗೆ ರಾಜ್ಯ ಬಾಲ ವಿಕಾಸ ಅಕಾದೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹಾಗೂ ಧಾರವಾಡ ಜಿಲ್ಲೆ ಪೊಲೀಸ್ ವರಿ ಷ್ಠಾಧಿಕಾರಿ ಗುಂಜನ್ ಆರ್ಯ ಚಾಲನೆ ನೀಡಿದರು. ಹುಬ್ಬಳ್ಳಿ ಬೈಸಿಕಲ್ ಕ್ಲಬ್, ಧಾರವಾಡ ಅಮೆಚ್ಯೂರ್ ಬೈಸಿಕಲ್ ಕ್ಲಬ್ ಹಾಗೂ ಧಾರವಾಡ ಸೈಕ್ಲಿಂಗ್ ಕ್ಲಬ್‌ಗಳ ಸಹಯೋಗದಲ್ಲಿ ಆಯೋಜಿಸಿದ್ದ, ಸೈಕ್ಲೋಥಾನ್‌ನಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟವನ್ನು ಪ್ರತಿನಿಧಿಸಿದ, ಸೈಕ್ಲಿಸ್ಟ್‌ಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡು, ಮಾನಸಿಕ ಹಾಗೂ ದೈಹಿಕ ಸುದೃಢತೆಯೊಂದಿಗೆ, ಆರೋಗ್ಯ ಪೂರ್ಣ ಜೀವನ ನಡೆಸಲು, ಪರಿಸರ ಸ್ನೇಹಿ ಸೈಕಲ್ ಬಳಸುವಂತೆ ಜನ ಜಾಗ್ರತಿ ಮೂಡಿಸಿದರು.

<><><>

ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದಲ್ಲಿ ಆಯೋಜಿತ, ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು, ಇಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಲಿದ್ದಾರೆ. ಅದಕ್ಕೂ ಮೊದಲು, ಇಂದು ಬೆಳಗ್ಗೆ 10 ಗಂಟೆಗೆ, ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಯಲ್ಲಿ, ಅವರು ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಮೈಸೂರು ಅರಮನೆಗೆ ಭೇಟಿ; ರಾಜವಂಶಸ್ಥರೊಂದಿಗೆ ಸಮಾಲೋಚನೆ.

ಕಿವುಡು ಮತ್ತು ಮೂಕ ವಿಶೇಷಚೇತನರ ಸಬಲೀಕರಣಕ್ಕಾಗಿ, 'ಸಂಕೇತ ಭಾಷಾ ನಿಘಂಟು' ಜಾರಿಗೆ.

ವಚನ ಸಾಹಿತ್ಯದ, ಬಹುಮುಖ ಅಧ್ಯಯನ ಮತ್ತು ಸಂಶೋಧನೆಗೆ, ಬಸವ ಸಮಿತಿ ಯೋಜನೆ.

ಇಂದು ವಿಶ್ವ ತೆಂಗು ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>